**ಸಾಕ್ಷಿಯನ್ನು ಈ ದಿನ ದಿಃ 21.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ

1. ನಾನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತ . ಆರೋಪಿತರು ಜೆ ಡಿ ಎಸ್ ಪಕ್ಷಕ್ಕೆ ಸೇರಿದವರು. ಈ ಘಟನೆ ನಡೆಯುವ 15 ದಿನಗಳ ಮುಂಚೆ ಮೈಸೂರು ನಗರ ಪಾಲಿಕೆಯ ಚುನಾವಣೆ ನಡೆದು, ಕಾಂಗ್ರೆಸ್ ಪಕ್ಷ ಗೆದ್ದಿತ್ತು. ಆ ಚುನಾವಣೆಗೆ ಆರೋಪಿತರಲ್ಲಿ ಯಾರೂ ಸ್ಪರ್ದಿಸಿರಲಿಲ್ಲ ಆದರೆ ಜೆ ಡಿ ಎಸ್ ಪಕ್ಷದಿಂದ ಅಫ್ತಾಬ್ ಎನ್ನುವವರು ಸ್ಪರ್ದಿಸಿದ್ದರು.

2. ಆ ಸಮಯದಲ್ಲಿ ಮೈಸೂರಿನ ಕಾವೇರಿ ನಗರದಲ್ಲಿ ಮನೆಗಳು ದೂರ ದೂರದಲ್ಲಿದ್ದವು ಎನ್ನುವುದು ಸರಿ. ಹೀಗಾಗಿ ಅಲ್ಲಿ ಮತದಾರರ ಸಂಖ್ಯೆ ಕಡಿಮೆ ಇತ್ತು ಎನ್ನುವುದು ಸರಿ. ಮನೆ ಮನೆಗೂ ಹೋಗಿ ಮತ ಯಾಚಿಸಿದ್ದೆವು ಎನ್ನುವುದು ಸರಿ .

3. ಘಟನೆ ನಡೆಯುವ ಮುಂಚೆ , ಈ ಆರೋಪಿತರು ಬಂದು ನನ್ನ ಮೇಲೆ ಹಲ್ಲೆ ಮಾಡಬಹುದು ಎಂದು ಅನಿಸಿತ್ತು. ಆ ಬಗ್ಗೆ ಪೋಲೀಸರಿಂದ ರಕ್ಷಣೆಯನ್ನೇನು ಕೋರಿರಲಿಲ್ಲ. ಆರೋಪಿತರು ಮೊದಲು ನನ್ನ ಜೊತೆಯಲ್ಲೇ ಇದ್ದುದ್ದರಿಂದ , ನನಗೆ ಅಂತಹ ತೊಂದರೆಯನ್ನೇನು ಮಾಡುವುದಿಲ್ಲ ಅಂದುಕೊಂಡಿದ್ದೆ. ಆರೋಪಿ 1, 3 , 4 ಮತ್ತು 5 ರವರು ನನಗೆ ಅವರುಗಳು ಚಿಕ್ಕವರಿದ್ದಾಗಿನಿಂದಲೂ ಗೊತ್ತು. 2 ನೇ ಆರೋಪಿ ಗಾಂಧೀ ನಗರದಿಂದ ಬಂದು ನಮ್ಮ ಬಡಾವಣೆಯಲ್ಲಿ ಸೇರಿಕೊಂಡರು. ಚಾ.ಸಾ. 1 ನಮ್ಮ ಮನೆಯ ಬಾಡಿಗೆದಾರರು. ಸುಮಾರು 20 ವರ್ಷಗಳಿಂದಲೂ ಅವರು ನಮ್ಮ

ಬಾಡಿಗೆದಾರರು ಮತ್ತು ಪರಿಚಯಸ್ಥರು. ಆರೋಪಿರಿಗೂ ಮತ್ತು ಚಾ,ಸಾ. 1 ರವರಿಗೂ ಮುಖ ಪರಿಚಯ , ಮಾತುಕತೆ ಇತ್ತು. ಚಾ,ಸಾ. 1 ಬೆಳಿಗ್ಗೆ ಕಾಲೇಜಿಗೆ ಹೋದರೆ , ಬಸ್ಸನ್ನು ಬಿಟ್ಟು ವಾಪಾಸ್ಸು ಮನೆಗೆ ಬರುವಾಗ ಸಂಜೆ 06.00 ರಿಂದ 07.00 ಗಂಟೆ ಆಗುತ್ತದೆ. ಕೆಲವೊಮ್ಮೆ ತಡವಾಗುತ್ತಿತ್ತು.

4. ನನ್ನ ಜಮೀನಿನಲ್ಲೇ ಗಣಪತಿಯನ್ನು ಕೂರಿಸಿಕೊಳ್ಳಿ ಎಂದು ಹೇಳಿದ್ದೆ. ಆದ್ದರಿಂದ ನನ್ನ ಜಮೀನಿನಲ್ಲಿ ಗಣಪತಿಯನ್ನು ಕೂರಿಸಿದ್ದರು. ಘಟನೆ ನಡೆದ ದಿನ ಮಧ್ಯಾಹ್ನ 02.00 ಗಂಟೆಯ ಸಮಯಕ್ಕೆ ಆರೋಪಿತರು ಅಫತಾಬ್ ನನ್ನು ಗಣೇಶ ಇಟ್ಟಿದ್ದ ಮಂಟಪಕ್ಕೆ ಕರೆಸಿಕೊಂಡು ಸನ್ಮಾನ ಮಾಡಿ ಕೂಗಾಡಿದ್ದರು ಮತ್ತು ನನಗೆ ದಿಕ್ಕಾರ ಎಂದು ಕೂಗಿದ್ದರು. ಆಗ ನಾನು ಹೋಗಿ ಕೇಳಲಿಲ್ಲ. ಸಂಜೆ 06.00 ಗಂಟೆಯ ಸಮಯದಲ್ಲಿ ಪುನಃ ಕಿರುಚಿ ಕೂಗಾಡುತ್ತಿದ್ದರು. ಆಗ ನಾನು ಹೋಗಿ, ಅಕ್ಕ ಪಕ್ಕದಲ್ಲಿ ಮನೆಗಳಿವೆ, ಕಿರುಚಾಡಬೇಡಿ ಎಂದು ಹೇಳಿದೆ. ಆಗ ಮಾತಿನ ಚಕಮಕಿ ನಡೆಯಿತು. ಇದನ್ನು ನೋಡಿದವರು ಪುಟ್ಟಸ್ವಾಮಿ, ದೊಡ್ಡಸಿದ್ದೇಗೌಡ , ಇನ್ನೂ ಬಹಳ ಜನ . ನಂತರ ಆರೋಪಿತರು ನನ್ನನ್ನು ಗಣಪತಿಯ ಪೆಂಡಾಲ್ ಗೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿದರು. ರಾತ್ರಿ 08.15 ಕ್ಕೆ ಈ ಘಟನೆ ನಡೆಯಿತು. ನನ್ನ ಜಾಗದಲ್ಲಿ ಕೂರಿಸಿದ್ದ ಗಣಪತಿ ಪೆಂಡಾಲ್ ಹಾಕಲು ನಾನು ಅನುಮತಿಯನ್ನೇನು ಪಡೆದಿರಲಿಲ್ಲ. ಆರೋಪಿತರು ಸೇರಿ ಗಣಪತಿಯನ್ನು ಅಲ್ಲಿ ಇಟ್ಟಿದ್ದರು. ಅದಕ್ಕೆ ನನ್ನ ಸಹಕಾರ ಇತ್ತು. ಅಂದರೆ ನಾನು, ಆರೋಪಿತರು, ಚಿಕ್ಕ ಮಕ್ಕಳು ಎಲ್ಲರೂ ಸೇರಿ ಅಲ್ಲಿ ಗಣಪತಿಯನ್ನು ಇಟ್ಟು ಉತ್ಸವವನ್ನು ಮಾಡಿದ್ದೆವು ಎನ್ನುವುದು ಸರಿ. ಗಣಪತಿಯನ್ನು ಇಟ್ಟು ವಿಸರ್ಜನೆ ಮಾಡುವವರೆಗೂ ನಿಮ್ಮ ಮತ್ತು ಆರೋಪಿತರ ನಡುವೆ ಯಾವುದೇ ದ್ವೇಷ ಇರಲಿಲ್ಲ ಅಲ್ಲವೇ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಸಂಜೆ 06.00

ಗಂಟೆಯವರೆಗೆ ಯಾವುದೇ ದ್ವೇಷ ಕಂಡು ಬಂದಿರಲಿಲ್ಲ. ನಂತರ ಕಂಡು ಬಂತು ಎನ್ನುತ್ತಾರೆ.

5. ನನ್ನ ದೇವಸ್ಥಾನದಿಂದ ಈ ಹುಡುಗರು ಇಟ್ಟಿದ್ದ ಗಣಪತಿ ಸ್ಥಳಕ್ಕೆ 100 ಮೀಟರ್ ದೂರ ಇತ್ತು. ಅದು ತೋಟದ ಸ್ಥಳ. ಮಕ್ಕಳು ವಿದ್ಯುತ್ ಸಂಪರ್ಕವನ್ನು ಪಡೆದಿರಲಿಲ್ಲ. ಗಣೇಶನಿಗೆ ಬೆಳಕಿನ ವ್ಯವಸ್ಥೆಯನ್ನು ಮಾಡಿರಲಿಲ್ಲ.

6. ಅದೇ ದಿನ ರಾತ್ರಿ ಪೋಲೀಸರು ನನ್ನ ಕಛೇರಿಯ ಎದುರು ಇರುವ ಬಸ್ಸ ಸ್ಟಾಂಡ್ ಬಳಿಯಲ್ಲಿ ಮಹಜರ್ ಮಾಡಿದರು ಎನ್ನುವುದು ತಿಳಿದು ಬಂತು. ಗಲಾಟೆ ನಡೆದ ಸ್ಥಳದಿಂದ 3 ಅಡಿ ದೂರದಲ್ಲಿ ಬೀದಿ ದೀಪ ಇತ್ತು. ನನ್ನ ಕತ್ತು, ಕೈ ಮತ್ತು ಸೊಂಟಕ್ಕೆ ಗಾಯಗಳಾಗಿದ್ದವು. ಮೊದಲನೇ ಏಟನ್ನು ಯಾರು ಹೊಡೆದರು ಎನ್ನುವುದು ನನಗೆ ಗೊತ್ತಾಯಿತು. ಮೊದಲನೇ ಏಟು ನನ್ನ ಕತ್ತಿಗೆ ಬಿತ್ತು. ಹೊಡೆದವನು ಹಿಂದಿನಿಂದ ಬಂದು ಹೊಡೆದ. ಆಗ ಅಕ್ಕ ಪಕ್ಕದ ಜನ ಕಿರುಚಿದರು. ನನಗೆ ಏಟು ಬಿದ್ದಾಗಲೇ ಯಾರು ಹೊಡೆದ ಎನ್ನುವುದು ಗೊತ್ತಾಯಿತು. 2 ನೇ ಏಟು ನನ್ನ ಎಡ ಕೈ ಗೆ ಬಿತ್ತು. ಮುಂದಿನಿಂದ ಬಂದು ಎಡ ಕೈಗೆ ಹೊಡೆದ. ಎಡ ಕೈಗೆ 3–4 ಏಟುಗಳನ್ನು ಹೊಡೆದ. ಮುಂದಿನಿಂದ ಚಾಕುವಿನಿಂದ ಹೊಟ್ಟೆಗೆ ಚುಚ್ಚಲು ಬಂದ , ಆದರೆ ಅದು ಸೊಂಟಕ್ಕೆ ಏಟಾಯಿತು. ನನ್ನ ಬಟ್ಟೆಎಲ್ಲಾ ರಕ್ತ ಮಯವಾಗಿತ್ತು. ನನ್ನ ಬಟ್ಟೆಯನ್ನು ಮಹಜರ್ ಕಾಲದಲ್ಲಿ ನೋಡಿದ್ದೆ. ಅದನ್ನು ಪುನಃ ನಾನು ಕೆಳಗಡೆ ನ್ಯಾಯಾಲಯದಲ್ಲಿ ಬಿಚ್ಚಿ ತೋರಿಸಿದಾಗ ನೋಡಿದ್ದೆ. ಅದು ಬಿಳಿ ಬಣ್ಣದ ಶರ್ಟ . ಪ್ಯಾಂಟ್ ಕಪ್ಪು ಬಣ್ಣದಾಗಿತ್ತು.

7. ನಾನು ಕೆಳಗೆ ಬೀಳಲಿಲ್ಲ , ಕುಸಿದು ಕುಳಿತೆ. ಜ್ಞಾನ ಇತ್ತು. ಅಲ್ಲಿದ್ದವರಲ್ಲಿ ನಾಗಲಾಂಬಿಕ , ಸುಜಾತ , ಚಂದ್ರು , ಕುಮಾರಿ ಎಲ್ಲರೂ ಕೂಗಿಕೊಂಡು ನನ್ನನ್ನು

ಬಿಡಿಸಲು ಪ್ರಯತ್ನಸಿದರು, ಇವರೆಲ್ಲರ ಪರಿಚಯ ಕಳೆದ 20 ವರ್ಷಗಳಿಂದ ಇದೆ. ಅವರುಗಳು ನನ್ನ ಸಂಬಂಧಿಕರಲ್ಲ. ಅವರು ನನ್ನ ಕಛೇರಿಗೂ ಬರುತ್ತಿದ್ದರು. ಅವರು ಬಾಡಿಗೆ ಮನೆಯವರು ಯಾವುದೇ ಪಕ್ಷಕ್ಕೂ ಸೇರಿದವರಲ್ಲ. ಚಂದ್ರು ನನ್ನನ್ನು ಅವರ ಮಾರುತಿ ವ್ಯಾನ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. 14.09.2018 ರಂದು ಪೋಲೀಸರು ಬಂದು ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡರು. ಆಗ ನಾನು ಆಸ್ಪತ್ರೆಯಲ್ಲಿದ್ದೆ. ಆಗ ವೈದ್ಯರು ಬಂದು ನನ್ನ ತಪಾಸಣೇಯನ್ನೇನು ಮಾಡಿರುವುದಿಲ್ಲ. ಆದರೆ ವೈದ್ಯರು ಹಾಜರಿದ್ದರು. ಪೋಲೀಸರು ವೈದ್ಯರಲ್ಲಿ ಹೇಳಿಕೆಯನ್ನು ಪಡೆಯಬಹುದೇ ಎಂದು ಕೇಳಿ ಅನುಮತಿಯನ್ನು ಪಡೆದಿದ್ದರು. ಘಟನಾ ಸ್ಥಳದಲ್ಲಿ ಪೋಲಲೀಸರು ಅಮಾನತ್ತು ಪಡಿಸಿಕೂಂಡ ವಸ್ತುಗಳನ್ನು ನಾನು ನ್ಯಾಯಾಲಯದಲ್ಲಿ ಮಾದಲ ಬಾರಿಗೆ ನೋಡಿದ್ದೆ.

8. ನನಗೆ ಗಾಯಗಳಾಗುವ ಮೊದಲು , ಯಾರು ಹೊಡೆದಾಟ ಬಡಿದಾಟ ಮಾಡಿಕೊಂಡಿರುವುದಿಲ್ಲ.

9. ಲೈಟ್ ಕಂಭದ ಬಳಿಯಲ್ಲೇ ಆರೋಪಿತರು ಆಟೋವನ್ನು ತಂದು ನಿಲ್ಲಿಸಿಕೂಂಡದ್ದರು. ನನ್ನ ಮೇಲೆ ಹಲ್ಲೆ ನಡೆಯುವ ಮೊದಲು ನಾನು ಆ ಆಯುಧಗಳನ್ನು ನೆಡೆರುವುದಿಲ್ಲ. ಕಾರ್ಪರೇಷನ್ ಚುನಾವಣೆಯೇ ಈಗ ಲಾಟೆಯಾಗಲು ಮೂಲ ಕಾರಣ ಎಂದು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ.

10. ಚಿಕ್ಕಮಕಕಳು ಗಣೆಶನನ್ನ ಇಟ್ಟಿದ್ದರಿಂದ ಅಲ್ಲಿ ಕುಡಿದುಕೊಂಡು ಬರುವವರು ಯಾರೂ ಇರಲಿಲ್ಲ. ಆ ದಿನ ಅಲ್ಲಿ ಕುಡಿದವರನ್ನು ಯಾರನ್ನು ನಾನು ನೋಡಲಿಲ್ಲ. ನಾನು ಪೋಲೀಸರ ಮುಂದೆ , ಕುಡಿದುಕೊಂಡು ಡ್ಯಾನ್ಸ್ ಮಾಡಿ ಗಲಾಟೆ ಮಾಡುತ್ತಿದ್ದರು

ಎಂದು ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ 1 ಎಂದು ಗುರುತುಪಡಿಸಿಕೊಳ್ಳಲಾಯಿತು. ಅಲ್ಲಿ ನಾವು ಗಾಂಧಿ ನಗರದವರು, ನಾವು ಕಾವೇರಿ ನಗರದವರು ಎಂದು ಗಲಾಟೆ ಆಯಿತು.

11. ಸಂಜೆ 07.00 ಗಂಟೆಗೆ ಗಣೇಶನನ್ನು ವಿಸರ್ಜನೆ ಮಾಡಲು ತೆಗೆದುಕೊಂಡು ಹೊರಟಾಗಿತ್ತು ಎನ್ನುವುದು ಸರಿ. 08.00 ಗಂಟೆಗೆ ಎಲ್ಲರು ಅವರವರ ಮನೆಗೆ ಹೋಗಿದ್ದರು ಎನ್ನುವುದು ಸರಿ. ಅಲ್ಲಿ 5 ನೋಆರೋಪಿಯ ಕಾರು ಸಹ ಇತ್ತು. ಅದನ್ನು ನಾನು ಮಹಜರ್ ಕಾಲಕ್ಕೆ ಪುನಃ ನೋಡಿದೆ.

12. ಮೊದಲು ಕೈ ಕೈ ಮಿಲಾಯಿಸಿ ತಳ್ಳಾಡಿ, ನಂತರ ಏಟು ಬಿದ್ದವು. ನಾನು ಪೋಲೀಸರ ಮುಂದೆ ಹೊಡೆತ ಬಿದ್ದ ಕೂಡಲೇ ನಾನು ಕೆಳಕ್ಕೆ ಬಿದ್ದೆ , ಆಗ ನಾಗಲಾಂಬಿಕೆ, ಸುಜಾತ , ಕಿರಚಿಕೊಂಡು ಎಲ್ಲರನ್ನು ಕಡೆದರು ಎಂದು ಹೇಳಿಕೆ ನೀಡಿರುತ್ತೇನೆ. ಪೋಲೇಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹಳೆ ವೈಶಮ್ಯದಿಂದ ಈ ಘನಟೆ ನಡೆದಿರುತ್ತದೆ ಎಂದು ಹೇಳಿರುವುದಿಲ್ಲ. ಆದರೆ ಚುನಾವಣೆಯ ವೈಶಮ್ಯ ಇತ್ತು ಎಂದು ಹೇಳಿರುತ್ತೇನೆ, ಸದರಿ ಹೇಳಿಕೆಯನ್ನು ನಿಡಿ 2 ಎಂದು ಗುರುತುಪಡಿಸಿಕೊಳ್ಳಲಾಯಿತು.

13. ಈ ಆರೋಪಿತರು ಆ ದಿನ ಆ ಸಮಯದಲ್ಲಿ ಆ ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ಈ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರಿಂದ ನನಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ಎಂ ಒ 1 ಮತ್ತು 2 ಕ್ಕೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ

ಪ್ಯಾಂಟ್ ಮತ್ತು ಶರ್ಟ ಅಂದರೆ ಎಂ ಒ 9 ನನಗೆ ಸಂಬಂಧಪಟ್ಟ ಬಟ್ಟೆಗಳು ಅಲ್ಲ ಎನ್ನುವುದು ಸರಿಯಲ್ಲ.

**14.** ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ 2 ರಿಂದ 5 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೂಂಡಿರುತ್ತೇವೆ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**